LEGISLATIVE ASSEMBLY.

FOURTH DAY.

Thursday, 31st August 1950.

The Assembly met in the Assembly Hall, Old Public Offices, Bangalore, at One of the Clock.

Mr. Speaker (Sri V. Venkatappa) in the Chair.

STARRED QUESTIONS

(to which oral answers were given.)

Mr. SPEAKER (Sri V. Venkatappa).—Questions.—Question No. 67.

Handing over the State Telephone System to the control of the Government of India.

Q.—67. **Rajamantrapravina H. B. GUNDAPPA GOWDA** (Hassan District—General).—

Will the Government be pleased to state :—

(*a*) when the State Telephone system was handed over to the control of the Government of Indian Union;

(*b*) the conditions under which it was handed over?

A.—**Sri K. T. BHASHYAM** (Minister for Law and Labour).—

(*a*) From 1st April 1950.

(*b*) No special conditions.

Sri H. B. GUNDAPPA GOWDA.—It is said that there were no special conditions attached to the handing over of the Telephone System. At least were there alternative conditions that the service should be as efficient as it was prior to the change-over ?

Sri K. T. BHASHYAM.—There were no such conditions. But it was hoped that the efficiency would be kept up.

Sri H. B. GUNDAPPA GOWDA.—What is the experience of Government—because they have got the services of telephones—about the present telephone service ? Is it as efficient as it was ?

Sri K. T. BHASHYAM.—It is a matter of opinion.

Sri H. B. GUNDAPPA GOWDA.—Is it a fact that there are many Secretaries and Assistant Secretaries to Government who have not got the service of telephone in spite of the fact that there is a great need for it ?

Sri K. T. BHASHYAM.—I think almost all Secretaries to Government have got it.

Sri H. B. GUNDAPPA GOWDA.—Almost all Secretaries ! Are there none at least who have not got telephones ?

Sri K. T. BHASHYAM.—I want notice to answer the question.

Establishment of Borstals and Children's Homes.

* *Q*–78. **Sri D. H. CHANDRASEKHARAIYA** (Chitaldrug District–General).—

Will the Government be pleased to state :—

(a) whether they are aware that there are legislative measures in force providing for the establishment of Borstals and Children's Homes for the benefit of youthful and young offenders when these measurs were passed ;

(b) the action that has been taken so far to start such institutions.

Sri K. T. BHASHYAM (Minister for Law and Labour) :—

A.–(a) Yes. The Mysore Children's Act was passed as Act No. XLV of 1943. The Mysore Borstal School Act was passed as Act No. XLVI of 1943.

(b) The question of starting a Borstal School and Children's Home in a suitable place near Bangalore for bringing into operation the Mysore Children's Act and Borstal School Act in the State is under the consideration of Government.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಈ ಕಾನೂನು ಜಾರಿಗೆ ಬಂದು ಏಳು ವರ್ಷಕಾಲವಾಯಿತು. ಚಿಕ್ಕ ವಯಸ್ಸಿನ ತಪ್ಪಿತಸ್ಥರಿಗೆ ಅಗತ್ಯವಾದ ಈ ಸಂಸ್ಥೆಗಳನ್ನು ಏರ್ಪಾಡು ಮಾಡುವ ಪ್ರಶ್ನೆ ಇನ್ನೂ ಪರಿಶೀಲನೆಯಲ್ಲಿದೆ ಎ ದು ಉತ್ತರ ದಯಪಾಲಿಸೋಣವಾಗಿದೆ. ಇದು ಏಕೆ ತೀರ್ಮಾನವಾಗಿಲ್ಲ? ಏಳು ವರ್ಷವಾದರೂ ಸಾಕಷ್ಟು ಕಾಲವಾಗಿಲ್ಲವೆಂದು ಅಭಿಪ್ರಾಯವೆ?

ಶ್ರೀ ಕೆ. ಟಿ. ಭಾಷ್ಯಂರವರು.—ಇದರ ಯೋಜನೆ ತಯಾರಾಗುವುದಕ್ಕೇ ಸ್ವಲ್ಪ ಕಾಲವಾಯಿತು. ಅಷ್ಟೆ ರಲ್ಲಿ ಹಣದ ಅಭಾವ ಬಂತು. ಅದರಿಂದ ಬೇಗ ಮಾಡಲು ಸಾಧ್ಯವಾಗಲಿಲ್ಲ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಯಾವಾಗ ಇದನ್ನು ಕಾರ್ಯಗತ ಮಾಡಬೇಕೆಂಬ ಯೋಚನೆ ಇದೆ?

ಶ್ರೀ ಕೆ. ಟಿ. ಭಾಷ್ಯಂರವರು.—ಎಷ್ಟು ಬೇಗ ಅವ ಕಾಶ ಆದರೆ ಅಷ್ಟು ಬೇಗ ಮಾಡುತ್ತೇವೆ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಈಗ ಎಳೆ ವಯಸ್ಸಿನ ತಕ್ಕೀರುಗಾರರನ್ನು ಸೆಂಟ್ರಲ್ ಜೈಲಿನಲ್ಲಿ ಇತರ ಎಲ್ಲ ಖೈದಿಗಳೊಡನೆಯೇ ಇಡುವ ಪದ್ಧತಿ ಇಲ್ಲವೆ?

ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ, ಅವರನ್ನು ಬೇರೆ ಇಡುತ್ತೇವೆ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಅಲ್ಲ. ಆ ಮಕ್ಕಳಿಗೆ ಯಾವುದಾದರೂ ಒಳ್ಳೆಯ ಶಿಕ್ಷಣವನ್ನು ಕೊಟ್ಟು ಇನ್ನು ಮುಂದೆ ಅಂತಹ ದುಷ್ಕೃತ್ಯಗಳನ್ನು ಮಾಡದೆ ಇರುವಂತೆ ಅವರಿಗೆ ಒಳ್ಳೆಯ ತಿಳಿವಳಿಕೆ ಬರುವಂತೆ ಮಾಡಲು ಏರ್ಪಾಡಿದೆಯೆ?

ಶ್ರೀ ಕೆ. ಟಿ. ಭಾಷ್ಯಂರವರು.—ಅನೇಕ ಏರ್ಪಾಡುಗಳನ್ನು ಮಾಡಿದ್ದೇವೆ. ಅವರಿಗೆ ಶಿಕ್ಷಣ ಕೊಡಲು ಸ್ಕೂಲಿದೆ, ಕೈಗಾರಿಕೆಗಳಿವೆ, ಆಟಪಾಟಗಳಿಗೆ ಏರ್ಪಾಡುಗಳಿವೆ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಎಳೆ ವಯಸ್ಸಿನ ಈ ತಪ್ಪಿತಸ್ಥರು ಮೊಂಡಬದ್ಧು ಹೋಗಿರುವ ಖೈದಿಗಳ ಜೊತೆಗೆ ಸೇರಲು ಜೈಲಿನಲ್ಲಿ ಅವಕಾಶವಿಲ್ಲವೆ?

ಶ್ರೀ ಕೆ. ಟಿ. ಭಾಷ್ಯಂರವರು.—ಸಾಮಾನ್ಯವಾಗಿ ಅವಕಾಶವಿಲ್ಲ, ಒಂದೊಂದು ವೇಳೆ ಸೇರಿದರೂ ಸೇರ ಬಹುದು.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಹೀಗೆ ಸೇರಲು ಅವಕಾಶವಿರುವುದರಿಂದ ಆ ಮಕ್ಕಳು ಮುಂದೆ ಅಂತಹ ಕೆಟ್ಟ ಮಾರ್ಗಗಳಿಗೆ ಹೋಗದೆ ಸತ್ಪ್ರಜೆಗಳಾಗಿ ಬಾಳಿ ಬೆಳೆಯುವುದಕ್ಕೆ ಪ್ರತಿಬಂಧಕವಾಗುತ್ತದೆಂಬುದನ್ನು ಸರ್ಕಾರದವರು ಮನಗಂಡಿಲ್ಲವೆ?

ಶ್ರೀ ಕೆ. ಟಿ. ಭಾಷ್ಯಂರವರು.—ಅಷ್ಟೇನೂ ಭಯಂಕರ ಪರಿಸ್ಥಿತಿ ಇಲ್ಲ. ಏನೇ ಆದರೂ ಸಣ್ಣ ಮಕ್ಕಳಿಗೆ ಬೇರೊಂದು ಸ್ಥಳವನ್ನು ಏರ್ಪಾಡು ಮಾಡಬೇಕೆಂದು ಸರ್ಕಾರದವರಿಗೆ ಉದ್ದೇಶವಿದೆ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಮದರಾಸು, ಬೊಂಬಾಯಿ ಪ್ರಾಂತಗಳಲ್ಲಿ ಇಂತಹ ಸಂಸ್ಥೆಗಳನ್ನು ಏರ್ಪಾಡುಮಾಡಿ ಅವು ಉತ್ತಮ ರೀತಿಯಲ್ಲಿ ನಡೆಯುತ್ತಿವೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೆ?

ಶ್ರೀ ಕೆ. ಟಿ. ಭಾಷ್ಯಂರವರು.—ಬೇರೆ ಕಡೆಗಳಲ್ಲಿ ಇಂತಹ ಏರ್ಪಾಡು ಮಾಡಿದ್ದಾರೆಂಬುದು ಗೊತ್ತು. ಆದರೆ ಅದು ಉತ್ತಮವಾಗಿ ನಡೆಯುತ್ತಿದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಹಿಂದೆ ಈ ಸಂಬಂಧವಾಗಿ ನಮ್ಮ ಸಂಸ್ಥಾನದಲ್ಲಿ ರಚಿಸಿದ್ದ ಸಮಿತಿಯವರು, ಬೇರೆ ಕಡೆಗಳಲ್ಲಿ ಈ ಏರ್ಪಾಡು ಚೆನ್ನಾಗಿ ನಡೆಯುತ್ತಿದೆ, ಇಲ್ಲಿಯೂ ಅದರಂತೆ ಮಾಡಿದರೆ ಒಳ್ಳೆಯದೆಂದು ವರದಿ ಮಾಡಿದ್ದಾರೆಂಬುದು ಸರ್ಕಾರದವರ ಅವಗಾಹನೆಗೆ ಬಂದಿದೆಯೆ?

ಶ್ರೀ ಕೆ. ಟಿ. ಭಾಷ್ಯಂರವರು.—ವರದಿಮಾಡಿದ್ದಾರೆಂದು ಗೊತ್ತಿದೆ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಇದಕ್ಕೆ ಹಣ ಖರ್ಚಾಗುತ್ತದೆ, ಈಗ ಹಣದ ಅಭಾವ ಎಂದು ಹೇಳಿದರು. ಈ ಯೋಜನೆಯನ್ನು ಜಾರಿಗೆ ತರಲು ಎಷ್ಟು ಹಣ ಬೇಕಾಗಬಹುದು?

ಶ್ರೀ ಕೆ. ಟಿ. ಭಾಷ್ಯಂರವರು.—ಲಕ್ಷಾಂತರ ರೂಪಾಯಿ ಬೇಕಾಗುತ್ತದೆ.

Establishment Clerks in Offices.

* *Q*—118. **Sri Kadidal MANJAPPA** (Shimoga District-General):—

Will the Government be pleased to state:—

Whether it has come to their notice that in some offices the establishment clerks are continuing for more than ten years without being transferred?

A.—**Sri T. SIDDALINGIAH.**—(Minister for Education and Public Health):—

Information regarding the offices in which they are continuing for more than ten years is not readily available.

ಶ್ರೀ ಕಡಿದಾಳ್ ಮಂಜಪ್ಪನವರು.—ಆಯಾ ಇಲಾಖೆಯ ನೌಕರರ ವರ್ಗಕ್ಕೆ ಸಂಬಂಧಪಟ್ಟ proposalಗಳನ್ನು ಎಸ್ಟಾಬ್ಲಿಷ್‌ಮೆಂಟ್ ಕ್ಲಾರ್ಕ್‌ಗಳು ತಾನೇ ಹಾಕುವುದು?

* ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಾಕಬಹುದು

ಶ್ರೀ ಕಡಿದಾಳ್ ಮಂಜಪ್ಪನವರು.—ಅಂತಹ ಸಂದರ್ಭಗಳಲ್ಲಿ ಎಸ್ಟಾಬ್ಲಿಷ್‌ಮೆಂಟ್ ಕ್ಲಾರ್ಕ್‌ಗಳು ಸಂಬಂಧಪಟ್ಟ ನೌಕರರಿಂದ ಲಂಚವನ್ನು ತೆಗೆದುಕೊಳ್ಳುವ ಪ್ರಸಂಗಗಳು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೆಲವು ಬಂದಿವೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಎಷ್ಟೋ ಆಫೀಸುಗಳಲ್ಲಿ ಹತ್ತು ವರ್ಷಗಳಿಗೆ ಮೇಲ್ಪಟ್ಟು ಅದೇ ಸ್ಥಳದಲ್ಲಿ ಈ ನೌಕರರಿದ್ದಾರೆಂಬುದನ್ನು ತಿಳಿದುಕೊಳ್ಳಲು ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮಾಡುತ್ತೇವೆ.